2) ಶ್ರೀ ಡಿ ಪಿ ಚಂದ್ರಶೇಖರಯ್ಯ–ಕಟ್ಟಡದ ಕಲ್ಲು–ಸರ್ವೆ ನಂ 28,2 00 ಎಕರೆ– ಉಪ್ಪಾರಹಳ್ಳಿ–ಕ ಗ ಗು ಸಂ 449, ದಿನಾಂಕ 6 4 2004 ರಿಂದ 5 ವರ್ಷ

3) ಶ್ರೀ ಎಸ್ ವಿ ಸುಬ್ಬಾರೆಡ್ಡಿ–ಕಟ್ಟಡದ ಕಲ್ಲು–ಸರ್ವೆ ನಂ 28,2 00 ಎಕರೆ–ಉಪ್ಪಾರಹಳ್ಳಿ –ಕ ಗ ಗು ಸಂ 450, ದಿನಾಂಕ 6 4 2004 ರಿಂದ 5 ವರ್ಷ

4) ಶ್ರೀ ಯಲ್ಲಪ್ಪ–ಕಟ್ಟಡದ ಕಲ್ಲು–ಸರ್ವೆ ನಂ 28,2 00 ಎಕರೆ–ಉಪ್ಪಾರಹಳ್ಳಿ–ಕ ಗ ಗು ಸಂ 587, ದಿನಾಂಕ 2 4 2005ರಿಂದ 5 ವರ್ಷ

ಇ) ಕಲ್ಲುಗುತ್ತಿಗೆಗಳನ್ನು ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಾವಳಿ, 1994ರ ನಿಯಮಗಳ ಅನುಸಾರ ಮಂಜೂರು ಮಾಡಲಾಗಿದೆ

ಈ) ಕಲ್ಲು ಗಣಿಗುತ್ತಿಗೆಯಿಂದ ಊರಿನಲ್ಲಿ ವಾಸಿಸುತ್ತಿರುವ ಗ್ರಾಮಸ್ಥರಿಗೆ ತೊಂದರೆಯಾಗುತ್ತಿರುವ ಬಗ್ಗೆ ಯಾವ ದೂರುಗಳು ಬಂದಿರುವುದಿಲ್ಲ

ಉ) ನಿರ್ದಿಷ್ಟ ದೂರು ಬಂದಲ್ಲಿ, ಸ್ಥಳ ಪರಿಶೀಲನೆ ಮಾಡಿ, ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು

ಊ) ಗೌರಿಬಿದನೂರು ತಾಲ್ಲೂಕಿನಲ್ಲಿ ನಡೆಯುತ್ತಿರುವ ಕಲ್ಲು ಗಣಿಗುತ್ತಿಗೆಗಳಿಂದ 2006–07ನೇ ಸಾಲಿನಲ್ಲಿ (ಡಿಸೆಂಬರ್ ಅಂತ್ಯದವರೆಗೆ) ರೂ 1 05 ಲಕ್ಷ ಆದಾಯ ಬಂದಿರುತ್ತದೆ ಇಲಾಖೆಯು ಸಂಗ್ರಹಿಸುವ ರಾಜಧನವು ರಾಜ್ಯದ ಬೊಕ್ಕಸಕ್ಕೆ ಸಂದಾಯವಾಗುತ್ತದೆ

433 **ಶ್ರೀ ಶಿವಶಂಕರ್ ರೆಡ್ಡಿ ಎನ್ ಹೆಚ್ (ಗೌರಿಬಿದನೂರು)** ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ಜಿಲ್ಲೆ ಗೌರಿಬಿದನೂರು ತಾಲೂಕಿನಲ್ಲಿರುವ ಮುಸ್ಲಿಂ ಬಾಂಧವರ ಪ್ರಾರ್ಥನಾ ಮಂದಿರಗಳು ಸುಸ್ಥಿತಿಯಲ್ಲಿ ಇಲ್ಲದೇ ಪ್ರಾರ್ಥನಾ ಕಾರ್ಯಕ್ಕೆ ಅನಾನುಕೂಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಗೌರಿಬಿದನೂರು ತಾಲ್ಲೂಕಿನಲ್ಲಿ ವಕ್ಫ್ ಮಂಡಳಿಯ ವ್ಯಾಪ್ತಿಗೆ ಬರುವ ಪ್ರಾರ್ಥನಾ ಮಂದಿಗಳ ಸಂಖ್ಯೆ ಎಷ್ಟು, ಹಾಗೂ ಇವುಗಳ ಅಭಿವೃದ್ಧಿಗೆ ಸರ್ಕಾರವು ಈ ಸಾಲಿನಲ್ಲಿ ಬಿಡುಗಡೆ ಮಾಡಿರುವ ಅನುದಾನವೇನು (ವಿವರ ಒದಗಿಸುವುದು),

ಇ) ಗೌರಿಬಿದನೂರು ತಾಲ್ಲೂಕಿನಲ್ಲಿ ಗಣನೀಯ ಪ್ರಮಾಣದಲ್ಲಿ ಮುಸ್ಲಿಂ ಬಾಂಧವರು ಇರುವುದರಿಂದ ದುಸ್ಥಿತಿಯಲ್ಲಿರುವ ಇವರುಗಳ ರುದ್ರಭೂಮಿಯ ಅಭಿವೃದ್ಧಿಗೆ ಸರ್ಕಾರವು ಯಾವುದೇ ಕ್ರಮ ಕೈಗೊಳ್ಳದೇ ಇರುವುದು ನಿಜವಲ್ಲವೇ,

ಈ) ಈ ಪ್ರಾರ್ಥನಾ ಮಂದಿರ ಹಾಗೂ ಖಬರಸ್ಥಾನ್ ಗಳ ಅಭಿವೃದ್ಧಿಗೆ ಸರ್ಕಾರದ ಕೈಗೊಳ್ಳುವ ಕ್ರಮವೇನು?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಗಳು)

ಅ) ಅಂತಹ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ

ಆ) ಗೌರಿಬಿದನೂರು ತಾಲ್ಲೂಕಿನಲ್ಲಿ ವಕ್ಫ್ ಮಂಡಳಿಯ ವ್ಯಾಪ್ತಿಗೆ ಬರುವ ಪ್ರಾರ್ಥನಾ ಮಂದಿರಗಳ ಸಂಖ್ಯೆ 36 ಈ ವರ್ಷದಲ್ಲಿ ಸದರಿ ತಾಲ್ಲೂಕಿನ ಒಂದು ಮಸೀದಿಗೆ ಅಭಿವೃದ್ಧಿಗಾಗಿ ರೂ 100 ಲಕ್ಷಗಳ ಅನುದಾನ ಮಂಜೂರು ಮಾಡಲಾಗಿದೆ

ಇ) 2004–05ನೇ ಸಾಲಿನಲ್ಲಿ ಗೌರಿಬಿದನೂರು ತಾಲ್ಲೂಕಿನ ಒಟ್ಟು 05 ರುದ್ರಭೂಮಿಯ ಅಭಿವೃದ್ಧಿಗಾಗಿ ಸರ್ಕಾರದಿಂದ ರೂ 100 ಲಕ್ಷಗಳ ಅನುದಾನ ಬಿಡುಗಡೆಗೊಳಿಸಲಾಗಿದೆ

1	ಖಬ್ರಸ್ಥಾನ್ ಜಾಮಿಯಾ ಮಸೀದಿ ಹಲ್ಲೀರಹಳ್ಳಿ, ಮಾಲೂರು ತಾಲ್ಲೂಕು	20,000–00
2	ಖಬ್ರಸ್ಥಾನ್ ಈಡಾಪುರ್, ಗೌರಿಬಿದನೂರು ತಾಲ್ಲೂಕು	20,000–00
3	ಖಬ್ರಸ್ಥಾನ್ ಬೀಚಗನಹಳ್ಳಿ ಕೋಲಾರ್ ತಾಲ್ಲೂಕು	20,000–00
4	ಖಬ್ರಸ್ಥಾನ್ ಮಿನಿಕನಪುರ್ಕಿ ಗೌರಿಬಿದನೂರು ತಾಲ್ಲೂಕು	20,000–00
5	ಖಬ್ರಸ್ಥಾನ್ ಅಲೀಪುರ, ಗೌರಿಬಿದನೂರು ತಾಲ್ಲೂಕು	20,000–00

ಈ) ಕೋಲಾರ ಜಿಲ್ಲೆ ಗೌರಿ ಬಿದನೂರು ತಾಲ್ಲೂಕಿನ ಗಂಗಸಂದ್ರ ಗ್ರಾಮದ ಜುಮ್ಮಾ ಮಸಜಿದ್ ಅಹಲಿಸುನ್ನತುಲ್ ಜಮಾತ್‌ಗೆ 2006–07ನೇ

ಸಾಲಿನಲ್ಲಿ ರೂ 100 ಲಕ್ಷಗಳ ಸಹಾಯ ಅನುದಾನವನ್ನು ಮಂಜೂರು ಮಾಡಲಾಗಿದೆ

434 **ಶ್ರೀ ಶಿವಶಂಕರ್ ರೆಡ್ಡಿ ಎನ್ ಹೆಚ್ (ಗೌರಿಬಿದನೂರು)** ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ಜಿಲ್ಲೆ ಗೌರಿಬಿದನೂರು ತಾಲೂಕಿನಲ್ಲಿ ಮರಳು ಗುತ್ತಿಗೆಯಿಂದ ಅಂತರ್‌ಜಲ ನೀರಿನ ಮಟ್ಟವು ಅತೀ ಕಡಿಮೆಯಾಗಿ ಕುಡಿಯಲು ನೀರು ಇಲ್ಲದೇ ರೈತರು ಕಂಗಾಲಾಗಿ ಸಂಕಷ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಸರ್ಕಾರವು ಮರಳು ಗುತ್ತಿಗೆಯನ್ನು ರದ್ದುಪಡಿಸಿ ಮುಂದಿನ ಬೇಸಿಗೆಯ ಸಮಯದಲ್ಲಿ ಅಂತರಜಲ ಮಟ್ಟವನ್ನು ಕಾಪಾಡಿ, ಈ ಭಾಗದ ಜನತೆಗೆ ಕುಡಿಯುವ ನೀರಿಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳಲು ಕೈಗೊಂಡಿರುವ ಕ್ರಮವೇನು,

ಇ) ಮರಳು ಗುತ್ತಿಗೆಯನ್ನು ರದ್ದುಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಗಳು)

ಅ) ಕೋಲಾರ ಜಿಲ್ಲೆ ಗೌರಿಬಿದನೂರು ತಾಲ್ಲೂಕಿನಲ್ಲಿ ಇಲಾಖೆಯು ಆಯ್ದುಕೊಂಡಿರುವ ನಿರೀಕ್ಷಣಾ ಕೊಳವೆಬಾವಿಗಳಲ್ಲಿ ಅಂತರ್ಜಲ ಮಟ್ಟದ ಇಳಿಕೆ ಕಂಡುಬಂದಿದೆ ಕೋಲಾರ ಜಿಲ್ಲೆ ರಾಜ್ಯದ ಅತೀ ಕಡಿಮೆ ಮಳೆ ಬೀಳುವ ಪ್ರದೇಶದಲ್ಲೊಂದಾಗಿದೆ ಬೇಸಿಗೆಯಲ್ಲಿ ಅಂತರ್ಜಲ ಮಟ್ಟವು ಸಹಜವಾಗಿ ಕಡಿಮೆಯಾಗುತ್ತದೆ ಹೆಚ್ಚಿನ ಸಂಖ್ಯೆಯ ಕೊಳವೆ ಬಾವಿಗಳ ಉಪಯೋಗದಿಂದಲು ನೀರಿನಮಟ್ಟ ಕಡಿಮೆಯಾಗುತ್ತಿದೆ ಮರಳು ಗುತ್ತಿಗೆಯಿಂದ ಅಂತರ್ಜಲ ಮಟ್ಟ ಸ್ವಲ್ಪಮಟ್ಟಿಗೆ ಕಡಿಮೆಯಾಗಿರುವ ಅವಕಾಶಗಳೂ ಇದೆ

ಆ) ಕೋಲಾರ ಜಿಲ್ಲೆ ಗೌರಿಬಿದನೂರು ತಾಲ್ಲೂಕಿನಲ್ಲಿ ಮರಳು ಗಣಿಗಾರಿಕೆಗೆ ಯಾವುದೇ ಗುತ್ತಿಗೆಗಳನ್ನು ನೀಡಲಾಗುತ್ತಿಲ್ಲ

ಇ) ಈಗಾಗಲೇ ನೀಡಿರುವ ಮರಳು ಗುತ್ತಿಗೆಯನ್ನು ರದ್ದುಪಡಿಸಲು ಹಾಗೂ ಹೊಸ ಗುತ್ತಿಗೆ ನೀಡದಂತೆ, ಜಿಲ್ಲಾ ಮಟ್ಟದ ಉಸ್ತುವಾರಿ ಸಮಿತಿ ಕ್ರಮ ಕೈಗೊಂಡಿದೆ